**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.**

**ಹಿರೇಕೆರೂರು.**

**ಸಿ.ಸಿ.ನಂಬರ್ಃ 240/2019**

ಸಿಡಬ್ಲ್ಯೂಃ 2

ಪಿಡಬ್ಲ್ಯೂಃ 2

| | | |
|---|---|---|
| ಸಾಕ್ಷಿಯ ಹೆಸರು | : | ರಾಮಕೃಷ್ಣ |
| ತಂದೆಯ ಹೆಸರು | : | ಬೆಟ್ಟಪ್ಪ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ರಾಣೇಬೆನ್ನೂರು |

ಇಂದು ದಿನಾಂಕಃ 29.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಮುಖ್ಯ ವಿಚಾರಣೆಃ** ಮಾನ್ಯ ಎಪಿಪಿಯವರಿಂದಃ

ಚಾಸಾ-3 ರವರ ಪರಿಚಯ ನನಗೆ ಇರುತ್ತದೆ. ಆರೋಪಿಯ ಪರಿಚಯ ನನಗೆ ಇರುತ್ತದೆ. ಸಾಕ್ಷಿಗೆ ಕಡತದಲ್ಲಿರುವ ಮಹಜರ ಎಂಬ ದಾಖಲೆಯನ್ನು ತೋರಿಸಲಾಗಿದ್ದು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 2019-2020 ನೇ ಸಾಲಿನಲ್ಲಿ ಬಾವಾಪುರ ತಾಂಡದಲ್ಲಿ ಮಾಡಿರುತ್ತೇನೆ. ನಾನು ರಾಣೇಬೆನ್ನೂರು ನಂದಿ ಆಸ್ಪತ್ರೆಯಲ್ಲಿರುವಾಗ ಪೋಲಿಸರು ಬಂದು ದಾಳಿಯಲ್ಲಿ ಸಹಕರಿಸುವಂತೆ ಕೋರಿದ್ದು ಅದರಂತೆ ನಾನು ಒಪ್ಪಿದ ಮೇರೆಗೆ ಪೋಲಿಸರು ಜೀಪಿನಲ್ಲಿ ಬಾವಾಪುರ ತಾಂಡಕ್ಕೆ ಹೋಗಿರುತ್ತಾರೆ. ಆ ರೀತಿ ನಮ್ಮನ್ನು ನೋಡಿ ಒಬ್ಬ ವ್ಯಕ್ತಿ ಓಡಿ ಹೋಗಿರುತ್ತಾರೆ. ನಂತರ ಚಾಸಾ-1 ರವರು ಓಡಿ ಹೋದ ವ್ಯಕ್ತಿಯ ಮನೆಯನ್ನು ಪರೀಶೀಲನೆ ಮಾಡಲು ಕೇಳಿದ್ದು ಅದರಂತೆ ಉಳಿದ ಪೋಲಿಸರು ಪರಿಶೀಲಿಸಿರುತ್ತಾರೆ. ಆಗ ಆ ಮನೆಯಲ್ಲಿ ಬೆಲ್ಲದ ಕೊಳೆ ಮತ್ತು ಕಳ್ಳಬಟ್ಟಿ ಸಾರಾಯಿ ಇತ್ತು. 1 ಲೀ ನ ಅಳತೆಯ 2 ಬಾಟಲ್ ಗಳಲ್ಲಿ ಕಳ್ಳ ಬಟ್ಟಿ ಸಾರಾಯಿಯನ್ನು ಹಾಗೂ ಬೆಲ್ಲದ ಕೊಳೆಯನ್ನು ನನ್ನ ಸಮಕ್ಷಮದಲ್ಲಿ ರಸಾಯನೀಕ ಪರೀಕ್ಷೆಗಾಗಿ ತೆಗೆದುಕೊಂಡಿರುತ್ತಾರೆ. ನಂತರ ಪೋಲಿಸರು ಪಂಚನಾಮೆಯನ್ನು ಬೆಳಿಗ್ಗೆ 9.30 ರಿಂದ 10.30 ರವರೆಗೆ ಬರೆದು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಓಡಿ ಹೋದ ವ್ಯಕ್ತಿಯ ಹೆಸರು ರವಿ ಗೋಪಾಲಪ್ಪ ಎಂದು ನನಗೆ ಗೊತ್ತಾಗಿರುತ್ತದೆ. ಮುದ್ದೆ ಮಾಲು-1 ನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ** ಆರೋಪಿ ಪರ ಶ್ರೀ ಬಿ ಸಿ ಕೆ ವಕೀಲರಿಂದಃ

ನಿಪಿ-2 ರಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪೋಲಿಸರು ನನ್ನನ್ನು ದಾಳಿ ಮಾಡಲು ಕರೆದುಕೊಂಡು ಹೋದ ದಿನಾಂಕ ನನಗೆ ನೆನಪಿರುವುದಿಲ್ಲ. ನಾನು ಬೆಳಿಗ್ಗೆ 7.20 ಗಂಟೆಯ ಸಮಯದಲ್ಲಿ ನಂದಿ ಆಸ್ಪತ್ರೆಯಲ್ಲಿ ಇದ್ದೆ. ಅಲ್ಲಿಂದ ನಮ್ಮನ್ನು ಬಾವಾಪುರ ತಾಂಡಕ್ಕೆ ಕರೆದುಕೊಂಡು ಹೋಗಿರುತ್ತಾರೆ. ನಾನು ಯಾವುದೇ ಪಂಚನಾಮೆಗೆ ಸಹಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-3 ರವರು ಪೋಲಿಸರೊಂದಿಗೆ ಹೋಗಿದ್ದೆವು. ನಾವು ಆರೋಪಿಯ ಮನೆ ದಾಳಿ ಮಾಡಿದೆವು ಹಾಗೂ ಆರೋಪಿಯ ಮನೆಯಲ್ಲಿ ಬೆಲ್ಲದ ಕೊಳೆ ಹಾಗೂ ಕಳ್ಳಬಟ್ಟಿ ಸಾರಾಯಿ ಸಿಕ್ಕಿತು ಎಂದು ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಮನೆಯಲ್ಲಿ 30 ಲೀಟರ್ ನಷ್ಟು ಬೆಲ್ಲದ ಕೊಳೆ ಇತ್ತು. ಚಾಸಾ-1 ರವರು ರಸಾಯನೀಕ ಪರೀಕ್ಷೆಗಾಗಿ ಕಳ್ಳಬಟ್ಟಿ ಸಾರಾಯಿ ಹಾಗೂ ಬೆಲ್ಲದ ಕೊಳೆಯನ್ನು ವಶಪಡಿಸಿಕೊಂಡರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.